## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 750 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 11.12.2023 |
| **ಪ್ರಶ್ನೆ** | | **ಉತ್ತರ** |
| (ಅ) | ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಸಕ್ತ ಸಾಲಿನಿಂದ ರಾಜ್ಯ ಸರ್ಕಾರ ಕೈಬಿಟ್ಟಿದೆಯೇ; | ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ-2020 ಅನ್ನು ಪ್ರಸಕ್ತ ರಾಜ್ಯ ಸರ್ಕಾರವು ಕೈಬಿಟ್ಟಿರುವುದಿಲ್ಲ. |
| (ಆ) | ಹಾಗಿದ್ದಲ್ಲಿ, ಎನ್‌ಇಪಿನಲ್ಲಿ ಈಗಾಗಲೇ ಅಭ್ಯಾಸ ನಡೆಸುತ್ತಿರುವ ವಿದ್ಯಾರ್ಥಿಗಳ ಸ್ಥಿತಿಗತಿಗಳೇನು; ಎನ್‌ಇಪಿ ರದ್ದುಗೊಳಿಸಲು ಕಾರಣಗಳೇನು; | ಹಾಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ಕಳೆದ ಎರಡು ಶೈಕ್ಷಣಿಕ ವರ್ಷಗಳಿಂದ ಈಗಾಗಲೇ ಅಳಡಿಸಿಕೊಂಡಿದ್ದ ಪಠ್ಯಕ್ರಮಗಳನ್ನು ಮುಂದುವರೆಸಿದ್ದು, ಪ್ರಸ್ತುತ ವಿದ್ಯಾರ್ಥಿಗಳು ಸದರಿ ಪಠ್ಯಕ್ರಮಗಳನ್ನೇ ಅಭ್ಯಾಸ ಮಾಡುತ್ತಿರುವುದರಿಂದ ರಾಜ್ಯದ ವಿದ್ಯಾರ್ಥಿ ಸಮೂಹಕ್ಕೆ ಹಾಗೂ ಮುಂದಿನ ವ್ಯಾಸಂಗಕ್ಕೆ ಯಾವುದೇ ಅಡಚಣೆ /ತೊಂದರೆಯಾಗಿರುವುದಿಲ್ಲ. |
| (ಇ) | ಶಿಕ್ಷಣ ಕ್ಷೇತ್ರ ಸಮವರ್ತಿ ಪಟ್ಟಿ (Concurrent list) ನಲ್ಲಿರುವುದರಿಂದ ರಾಜ್ಯ ಸರ್ಕಾರ ಪ್ರತ್ಯೇಕ ಶಿಕ್ಷಣ ನೀತಿ ರೂಪಿಸಲು ಸಂವಿಧಾನದಲ್ಲಿ ಅವಕಾಶವಿದೆಯೇ? | ರಾಷ್ಟ್ರೀಯ ಶಿಕ್ಷಣ ನೀತಿ ಕೇಂದ್ರ ಸರ್ಕಾರದ ಒಂದು ನೀತಿ ನಿರೂಪಣಾ ದಾಖಲೆಯಾಗಿದ್ದು, ರಾಜ್ಯ ಸಹ ತನ್ನದೇ ಆದ ಶಿಕ್ಷಣ ನೀತಿಯನ್ನು ಹೊಂದಬಹುದಾಗಿದೆ. ಅಲ್ಲದೇ, ದೇಶದ ಸಂಸತ್ ನಲ್ಲಿ ಅಂಗೀಕೃತವಾದ ಸಮವರ್ತಿ ಪಟ್ಟಿಯ ವಿಷಯಗಳಲ್ಲಿ ರಾಜ್ಯ ವಿಧಾನ ಮಂಡಲ ಸಹ ಕೆಲವು ಮಿತಿಗಳಿಗೆ ಒಳಪಟ್ಟು ಕಾನೂನನ್ನು ರಚಿಸಿಬಹುದಾಗಿದೆ. (ಭಾರತ ಸಂವಿಧಾನದ 7 ನೇ ಅನುಚ್ಛೇಧ-246 ರಡಿ ಅವಕಾಶವಿದೆ) |

ಸಂಖ್ಯೆ: ಇಡಿ 232 ಯುಎನ್‌ಇ 2023

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು